# ನಿಯಂತ್ರಣದ ಅಗತ್ಯ

ನಾವು 'ಅಭಿವೃದ್ಧಿ'ಯ ಧಾವಂತದಲ್ಲಿದ್ದೇವೆ. ಈ ಧಾವಂತದ ನಡುವೆ ಆತಂಕಗಳೂ ಇವೆ ಎಂದು ಬಲ್ಲವರೂ ಇದ್ದಾರೆ. ದೊಡ್ಡ ಆತಂಕವೇನೆಂದರೆ ಈ ಅಭಿವೃದ್ಧಿಯ ಆಕ್ರಮಣದಿಂದ ನಿಸರ್ಗ–ನಲುಗುತ್ತಿದೆ ಎನ್ನುವುದು. ಹೀಗೆ ಆತಂಕಗೊಂಡವರಲ್ಲಿ ಖ್ಯಾತ ಅರ್ಥಶಾಸ್ತ್ರಜ್ಞ ಹರ್ಮನ್ ಡಾಲಿ (Herman Daly) ಒಬ್ಬರು. ಅವರು ಸದ್ಯದ ಅಭಿವೃದ್ಧಿಯ ದಿಕ್ಕು ಮತ್ತು ತದನುಸಾರಿಯಾದ ಆರ್ಥಿಕ ನಿಲುವುಗಳನ್ನು ವಿಮರ್ಶಿಸುತ್ತ, ಸದ್ಯದ ಅರ್ಥಶಾಸ್ತ್ರ ಕಡೆಗಾಣಿಸಿದ ವಿಷಯಗಳನ್ನು ಮತ್ತೆ ಮುನ್ನೆಲೆಗೆ ತಂದು ವಿವೇಚಿಸಬೇಕಿದೆ ಎಂದು ಪ್ರತಿಪಾದಿಸುತ್ತಿದ್ದಾರೆ. ಅರ್ಥಶಾಸ್ತ್ರದ ಪರಿಭಾಷೆಯಲ್ಲಿಯೇ ಮಾತಾಡುತ್ತಿದ್ದಾರೆ. ಆದರೆ ಹೊಸ ಅರ್ಥಶಾಸ್ತ್ರವನ್ನು ಸೃಷ್ಟಿಸಬೇಕೆನ್ನುತ್ತಿದ್ದಾರೆ.

ಅವರ ಚಿಂತನೆಗಳು ಇವು:

ಇದುವರೆಗಿನ ಆರ್ಥಿಕ ದೃಷ್ಟಿಕೋನ; ಅರಣ್ಯ–ನೀರು–ಜೀವಿ ಪರಿಸರವನ್ನು ಮನುಷ್ಯರಿಗೆ ಬಿಟ್ಟಿಯಾಗಿ ಸಿಕ್ಕಿದ ಸಂಪತ್ತು (Free goods) ಎಂದು ಬಗೆಯುತ್ತದೆ. ಇದು ದುಷ್ಟ ಆರ್ಥಿಕತೆ. ಈ ನಿಸರ್ಗ ಸಂಪತ್ತಿಗೆ ಯುಕ್ತವಾದ ಮೌಲ್ಯವನ್ನು ಅಂದಾಜಿಸಿ, ಅದನ್ನು ಹೂಡಿದ ಬಂಡವಾಳವನ್ನಾಗಿ ಗ್ರಹಿಸಬೇಕು.

ಇದರದ್ದೇ ಮುಂದುವರಿಕೆಯಾಗಿ, ಪರಿಸರಕ್ಕೆ ಸಲ್ಲಿಸಬೇಕಾದ ತೆರಿಗೆಯೊಂದಿಗೆ ಎಂಬ ಕಲ್ಪನೆಯನ್ನು Ecological taxation ರೂಢಿಸಬೇಕು. ಅಂದರೆ ವಿದ್ಯುತ್ ನೀರು ಮುಂತಾದ ವಿಷಯಗಳಲ್ಲಿ ಸಬ್ಸಿಡಿ ನೀಡುವುದನ್ನು ನಿಲ್ಲಿಸಬೇಕು.

ಅರಣ್ಯ ನಾಶ, ಅದರಿಂದಾಗತಕ್ಕ ಮಣ್ಣಿನ ಸವಕಳಿ, ನಿಸ್ಸಾರತೆ, ಅಣೆಕಟ್ಟುಗಳಲ್ಲಿ ಹೂಳು ತುಂಬುವಿಕೆ, ಜೀವ ಪರಿಸರದ ನಾಶದಿಂದಾಗತಕ್ಕ ಎಲ್ಲ ಬಗೆಯ ನಷ್ಟಗಳನ್ನು ಗ್ರಹಿಸಿ– ಈ ನಷ್ಟಗಳನ್ನು ಮೂಲ ವೆಚ್ಚವನ್ನಾಗಿಯೇ ಗಣಿಸಬೇಕು.

ನಿಸರ್ಗ ಸಂಪತ್ತನ್ನು ಕಡಿಮೆ ಬಳಸತಕ್ಕ ಮಾನವ ಶ್ರಮದ ಮೇಲೆ ಹೆಚ್ಚು ಕೇಂದ್ರಿತವಾದ ತಂತ್ರಜ್ಞಾನವನ್ನು ಬಳಸಬೇಕು.

ಅರಣ್ಯ; ನೀರು; ಮತ್ಸ್ಯ ಸಂಪತ್ತು, ಪರಿಸರ ಇಂಥ ನಿಸರ್ಗನಿಧಿಯನ್ನು ಬೆಳೆಸುವುದಕ್ಕೆ ಬಂಡವಾಳ ತೊಡಗಿಸಬೇಕು– ಮತ್ತು ಇವೆಲ್ಲವನ್ನೂ ಸಾಧಿಸಲು ಜಾಗತೀಕರಣವೇ ಆಶಯವಾಗಿರುವ ಆರ್ಥಿಕ ಪ್ರಮೇಯಗಳನ್ನು ತ್ಯಜಿಸಿ ರಾಷ್ಟ್ರ ಕೇಂದ್ರಿತವಾದ ಆರ್ಥಿಕತೆಗೆ ಹೆಚ್ಚು ಒತ್ತುಕೊಡಬೇಕು. ಅಂದರೆ ಅಂತಾರಾಷ್ಟ್ರೀಯ ಮಾರುಕಟ್ಟೆಗಿಂತ ಹೆಚ್ಚಾಗಿ ಸ್ಥಳೀಯ ಮಾರುಕಟ್ಟೆಯೇ ಲಕ್ಷ್ಯವಾಗಿರುವ ಸ್ಥಳೀಯ ಉತ್ಪಾದನೆಗಳನ್ನು ಪ್ರೋತ್ಸಾಹಿಸಬೇಕು.

ಹೀಗೆ ಚಿಂತಿಸುವ ಹರ್ಮನ್ ಡಾಲಿ, ಜಾಗತೀಕರಣದಿಂದ ರಾಷ್ಟ್ರೀಯ ವ್ಯಕ್ತಿತ್ವವೇ ನಲುಗಿ ಹೋಗುವ ಸಂಭವವಿದೆ ಎನ್ನುತ್ತಾರೆ. ಜಾಗತಿಕ ಕಂಪೆನಿಗಳ ಬಲ ಇನ್ನಷ್ಟು ಬೆಳೆಯುತ್ತ ಹೋಗುತ್ತದೆ ಎನ್ನುತ್ತಾರೆ. ಈ ಅಪಾರವಾದ ಬಲವನ್ನು ನಿಯಂತ್ರಣ ಮಾಡತಕ್ಕ ವಿಶ್ವ ಸರಕಾರವೊಂದು ಇರಬೇಕಿತ್ತು– ಆದರೆ ಇಲ್ಲವಲ್ಲ ಎಂದು ಚಿಂತಿಸುತ್ತಾರೆ. ನಿಯಂತ್ರಣ ಮಾಡಲಾಗದೇ ಇದ್ದರೆ ಅದು ಅತ್ಯಂತ ಅಪಾಯಕರ ಎನ್ನುತ್ತಾರೆ. ನಿಯಂತ್ರಣ ರೂಪವಾಗಿಯೇ, ರಾಷ್ಟ್ರ ಕೇಂದ್ರಿತವಾಗಿಯೇ ಆರ್ಥಿಕತೆಯನ್ನು ಬೆಳೆಸಬೇಕು ಎಂದು ವಾದಿಸುತ್ತಾರೆ. ಡಾಲಿಯವರ ಘೋಷವಾಕ್ಯವಿದು.

'Make the capital less global and more nattional' ಡಾಲಿ, ಪ್ರೊ. ಕೀನ್ಸ್ (Keaness) ಅವರ ಮಾತನ್ನು ತನ್ನ ವಾದದ ಪೋಷಣೆಗಾಗಿ ಉಲ್ಲೇಖಿಸುತ್ತಾರೆ. ಈ ಕೀನ್ಸ್ ಯಾರೆಂದರೆ ಕಳೆದ ಶತಮಾನದ ಖ್ಯಾತ ಅರ್ಥಶಾಸ್ತ್ರಜ್ಞರು. ನಮ್ಮ ಮೊದಲ ಪ್ರಧಾನಿ ನೆಹರೂರವರ ಮೇಲೆ ತುಂಬ ಪ್ರಭಾವ ಮಾಡಿದ್ದವರು. ಪ್ರಾಯಃ ನೆಹರು, ಕೀನ್ಸ್‌ರ ವಿದ್ಯಾರ್ಥಿ ಆಗಿದ್ದರೆಂದು ಓದಿದ ನೆನಪು (?) ಕೀನ್ಸ್, ವಿಶ್ವ ಬ್ಯಾಂಕಿನ ಸ್ಥಾಪಕರಲ್ಲಿ ಓರ್ವರದು ಕೂಡ.

ಪ್ರೊ. ಕೀನ್ಸ್ ಅವರ ಹೇಳಿಕೆಯ ಅನುವಾದವಿದು:

'ವಿದೇಶೀ ಆರ್ಥಿಕ ವ್ಯವಹಾರದ ಜಟಿಲತೆ ಎಷ್ಟು ಕಡಿಮೆಯಾಗುತ್ತದೋ ಅಷ್ಟು ಒಳ್ಳೆಯದು ಎಂದು ಭಾವಿಸುವವರ ಪರವಾಗಿಯೇ ನಾನು ಇದ್ದೇನೆ. ಕೆಲವು ವಿಷಯಗಳೇನೋ ಸ್ವಾಭಾವಿಕವಾಗಿ ಅಂತಾರಾಷ್ಟ್ರೀಯ ವಿಸ್ತಾರಕ್ಕೆ ಹರಡುವಂಥವು. ಕಲೆ–ಪ್ರವಾಸ–ಜ್ಞಾನ–ಸಿದ್ಧಾಂತಗಳು ಇತ್ಯಾದಿ. ಆದರೆ ವಸ್ತುಗಳ ಉತ್ಪಾದನೆ ಇದೆಯಲ್ಲ– ಈ ಪ್ರಕ್ರಿಯೆ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲ ಸ್ಥಳೀಯವಾಗಿಯೇ ನಡೆಯಲಿ ಮತ್ತು ಎಲ್ಲಕ್ಕಿಂತ, ಆರ್ಥಿಕತೆಯು ರಾಷ್ಟ್ರೀಯ ವ್ಯಾಪ್ತಿಯಲ್ಲಿ ಉಳಿಯಲಿ 'above all, let finannce be primarily national '

ಡಾಲಿಯವರ ಈ ವಿವೇಚನೆಯನ್ನು ಈ ಎರಡು ಶತಮಾನಗಳಲ್ಲಿ ಅರ್ಥಶಾಸ್ತ್ರ ನಡೆದುಬಂದ ದಾರಿಯ ಕುರಿತಂತೆ ಒಂದು 'ತಪ್ಪೊಪ್ಪಿಗೆ' ಎಂದುಕೊಳ್ಳಬಹುದು. ಏಕೆಂದರೆ ಸ್ವಯಂ ಡಾಲಿ ವಿಶ್ವ ಬ್ಯಾಂಕಿನ ಪರಿಸರ ವಿಭಾಗದಲ್ಲಿ ಸಲಹೆಗಾರ ಆಗಿದ್ದರು. ಅಲ್ಲಿಂದ ಭಿನ್ನಾಭಿಪ್ರಾಯದ ಕಾರಣದಿಂದ ಹೊರಬಂದವರು.

ಈ ಧಾಟಿಯಲ್ಲಿ ಚಿಂತಿಸುವವರಲ್ಲಿ ಡಾಲಿ ಏಕಾಂಗಿ ಎಂದಲ್ಲ. ಈಗ ಅಭಿವೃದ್ಧಿಯ ವಿಪರಿಣಾಮಗಳನ್ನು ನೋಡಿ ಬಹುಜನರಿಗೆ ಹೀಗೆ ಅನ್ನಿಸತೊಡಗಿದೆ. ನಿಜದಲ್ಲಿ ಏನು ನಡೆಯುತ್ತಿದೆ ಎಂದು ತೆರೆದ ಕಣ್ಣಿನಿಂದ ನೋಡಬಲ್ಲವರಿಗೆ ಹೀಗೆ ಕಾಣುವುದು ಸಹಜ. ಪಾಶ್ಚಿಮಾತ್ಯ ದೇಶಗಳಲ್ಲೇ ಸದ್ಯದ ಆರ್ಥಿಕ ಧೋರಣೆಗಳು ಸಮಗ್ರ ಸಮಾಜಕ್ಕೆ ಅಲ್ಲ– ಕೆಲವರಿಗೆ ಮಾತ್ರ ಅನುಕೂಲಕರ ಎಂಬ ಸತ್ಯ ಬಹಿರಂಗವಾಗುತ್ತಿದೆ.

ಅಷ್ಟೇಕೆ; ಡಾಲಿ ಉದ್ಧರಿಸಿರುವ ಕೀನ್ಸ್‌ರವರ ಹೇಳಿಕೆಯನ್ನು ನೋಡಿದರೆ ಈ ಆರ್ಥಿಕ ಧೋರಣೆಗಳಲ್ಲಿ ಅಂತರ್ನಿಹಿತವಾಗಿರುವ ವಿ–ಪರಿಣಾಮಗಳನ್ನು ಕೀನ್ಸ್ ಊಹಿಸಿದ್ದರು ಎಂದು ತಿಳಿಯಬಹುದು.

ಆದರೆ ಕೀನ್ಸ್ ಮೂಲತಃ ಅರ್ಥಶಾಸ್ತ್ರವು ಅಥವಾ ಅರ್ಥ ಪ್ರಪಂಚವು ನಿರಂತರ ವಿಕಾಸವಾಗುತ್ತ ಹೋಗಬೇಕೆನ್ನುವ ನಂಬಿಕೆಯವರು. ಹಾಗೆ ವಿಕಸಿತಗೊಳ್ಳುವುದಕ್ಕೆ ಬೇಕಾದ ಭೂಮಿಕೆಯನ್ನು ಗುರುತಿಸುತ್ತ ಹೋಗುವುದೇ ಅರ್ಥಶಾಸ್ತ್ರದ ಕರ್ತವ್ಯ ಎಂದು ನಂಬಿದವರು. ಈ ಮೇಲಿನ ಅವರ ಟಿಪ್ಪಣಿ ಏನಿದ್ದರೂ ಅರ್ಥಶಾಸ್ತ್ರೀಯ ಪ್ರಮೇಯಗಳು ಕಾರ್ಯಾನ್ವಿತಗೊಳ್ಳುವಾಗ ಸಂಭವಿಸುವ ಲೋಪದೋಷಗಳನ್ನು ಸರಿಪಡಿಸುವ ಪಶ್ಚಾತ್ ವಿವೇಕ ಎಂದುಕೊಳ್ಳಬಹುದು. ತಮ್ಮ ಶಾಸ್ತ್ರದ ಮೂಲಭೂತ ಪರಿಕಲ್ಪನೆಗಳನ್ನೇ ಮರುಪರಿಶೀಲನೆಗೆ ಒಳಪಡಿಸಬೇಕಾದ ಅಗತ್ಯ. ಇಂಥವರಿಗೆ ಕಂಡುಬರುವುದಿಲ್ಲ. ವಿಜ್ಞಾನ–ತಂತ್ರಜ್ಞಾನಗಳಲ್ಲಿಯೇ ಹೇಗೋ ಅರ್ಥಶಾಸ್ತ್ರದಲ್ಲೂ ಹಾಗೇ Growth; ಬೆಳವಣಿಗೆ ಎನ್ನುವುದು ಮೂಲ ಮಂತ್ರ. Growthಎನ್ನುವುದು ಆಕ್ರಮಣದ ಇನ್ನೊಂದು ಮುಖ. ಈ ಪರಿಕಲ್ಪನೆಗಿಂತ ತೀರ ಭಿನ್ನವಾದ ಪರಿಕಲ್ಪನೆಯೊಂದನ್ನು ರೂಪಿಸುವ ಜ್ಞಾನ ಮೀಮಾಂಸೆಯ ಪರಿಚಯ ವಿಜ್ಞಾನಕ್ಕೂ ಇಲ್ಲ, ಅರ್ಥಶಾಸ್ತ್ರಕ್ಕೂ ಇಲ್ಲ. ಇದೇ ದುರಂತ.

■ **ತೋಷ**

## ಮಾತೇ ಮುತ್ತು

★ ನೀನು ಬೇರೆಯವರ ಯೋಗ್ಯತೆ ಅಳೆಯುತ್ತಿದ್ದಿಯಾದರೆ ನಿನಗೆ ಪ್ರೀತಿಸಲು ಸಮಯವೇ ಇರುವುದಿಲ್ಲ.

ಮದರ್ ತೆರೇಸಾ

★ ನದಿ, ಪರ್ವತ, ನೀರು ಹೀಗೆ ಯಾವುದು ನೋಡಲು ಸಿಕ್ಕರೂ (ನಿಸರ್ಗ) ಅದು ಹರಿದರ್ಶನವೆಂದೇ ತಿಳಿಯಬೇಕು

– ಭಾಗವತ

★ ನಿರಾಶೆಯ ಇನ್ನೊಂದು ಬದಿಯಿಂದ ಜೀವನ ಆರಂಭವಾಗುತ್ತದೆ.

ಜೀನ್ ಪಾಲ್ ಸಾರ್ತ್ರೆ

★ ಯುವಕರಾಗಿದ್ದಾಗ ರೂಢಿಸಿಕೊಳ್ಳುವ ಒಳ್ಳೆಯ ಅಭ್ಯಾಸಗಳು ಜೀವನವನ್ನು ಬದಲಾಯಿಸುತ್ತವೆ.

ಅರಿಸ್ಟಾಟಲ್

★ ಅಹಂಕಾರವಿಲ್ಲದ ಮನುಷ್ಯ ಯಾವ ಧರ್ಮಗ್ರಂಥವನ್ನೂ ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ ಮೋಕ್ಷ ಪಡೆಯಬಹುದು.

ಸ್ವಾಮಿ ವಿವೇಕಾನಂದ

★ ಭವಿಷ್ಯವನ್ನು ನಾವೇ ರೂಪಿಸಿಕೊಂಡರೂ, ಅದು ವಿಧಿ ಎಂದುಕೊಳ್ಳುವುದು ಮೂಢತನ.

ಬೆಂಜಮಿನ್ ಡಿಸ್ರೇಲಿ

★ ಬಹಳಷ್ಟು ಜನ ಯೋಚಿಸಲು ಇಷ್ಟ ಪಡುವುದಿಲ್ಲ. ಯೋಚಿಸಿದರೆ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ತೀರ್ಮಾನಗಳು ಯಾವಾಗಲೂ ನಮಗೆ ಹಿತಕರ ಆಗಿರಬೇಕೆಂದಿಲ್ಲ.

ಹೆಲೆನ್ ಕೆಲ್ಲರ್